ಭಾನುವಾರದ ಉಷ್ಣಾಂಶ
30° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣವಿರಲಿದ್ದು, ಮಳೆಯಾಗುವ ಸಾಧ್ಯತೆಯಿದೆ. ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಕೆಲವೆಡೆ ಗುಡುಗು–ಸಿಡಿಲು ಸಹಿತ ಮಳೆ ಸಾಧ್ಯತೆ.

ಹವಾಮಾನ

ಸೋಮವಾರ	ಮಂಗಳವಾರ	ಬುಧವಾರ
30° 18°	28° 18°	28° 17°

ಸರ್ಕಾರದ ಆದೇಶ ಹಿನ್ನೆಲೆ • 300 ಹುದ್ದೆಗಳ ಭರ್ತಿಗೆ ಅಧಿಸೂಚನೆ • ಜನಸ್ನೇಹಿ ಅಧಿಕಾರಿಗಳ ನೇಮಕಕ್ಕೆ ಅಡ್ಡಿ

ಪಿಎಸ್‌ಐ ನೇಮಕಾತಿಗೆ ಸಂದರ್ಶನ ರದ್ದು

• ಸಂತೋಷ ಜಿಗಳಿಕೊಪ್ಪ

ಪ್ರಜಾವಾಣಿ ವಿಶೇಷ

ಬೆಂಗಳೂರು: ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ (ಪಿಎಸ್‌ಐ) ಹುದ್ದೆಗಳ ಭರ್ತಿಗೆ ಹಲವು ವರ್ಷಗಳಿಂದ ನಡೆಸಿಕೊಂಡು ಬಂದಿದ್ದ ಸಂದರ್ಶನ ಪ್ರಕ್ರಿಯೆಯನ್ನು ಈ ವರ್ಷದಿಂದ ರದ್ದುಪಡಿಸಲಾಗಿದೆ.

'ಈ ಕ್ರಮವು ಅವೈಜ್ಞಾನಿಕವಾಗಿದ್ದು, ಜನಸ್ನೇಹಿ ಅಧಿಕಾರಿಗಳ ನೇಮಕ ಮಾಡುವ ಪ್ರಕ್ರಿಯೆಗೆ ಅಡ್ಡಿಯಾಗಲಿದೆ' ಎಂಬ ಅಭಿಪ್ರಾಯ ನಿವೃತ್ತ ಅಧಿಕಾರಿಗಳ ವಲಯದಿಂದ ವ್ಯಕ್ತವಾಗಿದೆ.

ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ 300 ಪಿಎಸ್‌ಐ ಹುದ್ದೆಗಳ ಭರ್ತಿಗಾಗಿ ಇತ್ತೀಚೆಗಷ್ಟೇ ಅಧಿಸೂಚನೆ ಹೊರಡಿಸಲಾಗಿದೆ. ಲಕ್ಷಾಂತರ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ.

ರಾಜ್ಯ ಸರ್ಕಾರದ ಗ್ರೂಪ್ 'ಸಿ' ದರ್ಜೆಯ ಹುದ್ದೆಗಳ ಪಟ್ಟಿಯಲ್ಲಿರುವ ಪಿಎಸ್‌ಐ ನೇಮಕಾತಿ ಪ್ರಕ್ರಿಯೆ ಆರಂಭವಾದಾಗಿನಿಂದ ಸಂದರ್ಶನ ನಡೆಸಿಕೊಂಡು ಬರಲಾಗುತ್ತಿತ್ತು. 'ಗ್ರೂಪ್ 'ಸಿ' ಹಾಗೂ 'ಡಿ' ದರ್ಜೆ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಸಂದರ್ಶನ ನಡೆಸಬಾರದು' ಎಂಬುದಾಗಿ ಜುಲೈನಲ್ಲಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಅದನ್ನು ಆಧರಿಸಿ ಪೊಲೀಸ್ ನೇಮಕಾತಿ ನಿಯಮಕ್ಕೆ ತಿದ್ದುಪಡಿ ಮಾಡಲಾಗಿದೆ.

'300 ಪಿಎಸ್‌ಐ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನ. 6 ಕೊನೆಯ ದಿನವಾಗಿತ್ತು. ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳನ್ನು ದೈಹಿಕ ಪರೀಕ್ಷೆ, ಲಿಖಿತ ಪರೀಕ್ಷೆ ಹಾಗೂ ವೈದ್ಯಕೀಯ ಪರೀಕ್ಷೆ ಮೂಲಕ ಪಾರದರ್ಶಕವಾಗಿ ಹುದ್ದೆಗೆ ಆಯ್ಕೆ ಮಾಡಲಾಗುವುದು. ಅದಕ್ಕೆ ಬೇಕಾದ ಸಿದ್ಧತೆ ಮಾಡಿಕೊಳ್ಳಲಾಗಿದೆ' ಎಂದು ನೇಮಕಾತಿ ವಿಭಾಗದ ಎಡಿಜಿಪಿ ಟಿ.ಸುನೀಲ್‌ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ದೈಹಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಲಿಖಿತ ಪರೀಕ್ಷೆ ಬರೆಯಬೇಕು. ಪ್ರಥಮ ಪತ್ರಿಕೆಗೆ (ಭಾಷಾಂತರ, ಪ್ರಬಂಧ, ಸಾರಾಂಶ) 50 ಅಂಕ ಹಾಗೂ ಎರಡನೇ ಪತ್ರಿಕೆಗೆ (ಸಾಮಾನ್ಯ ಜ್ಞಾನ) 150 ಅಂಕಗಳನ್ನು ನಿಗದಿಪಡಿಸಲಾಗಿದೆ. ಪರೀಕ್ಷೆಯಲ್ಲಿ ಪಡೆದ ಅಂಕ ಹಾಗೂ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳ ಪ್ರಕಾರ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ವೈದ್ಯಕೀಯ ಪರೀಕ್ಷೆ ನಡೆಸಲಾಗುತ್ತದೆ. ಅದಾದ ನಂತರವೇ ಅಂತಿಮ ಪಟ್ಟಿ ಪ್ರಕಟಿಸಲಾಗುವುದು' ಎಂದು ಹೇಳಿದರು.

'ಇದುವರೆಗೂ 10 ಅಂಕಗಳಿಗೆ ಸಂದರ್ಶನ ನಡೆಸಲಾಗುತ್ತಿತ್ತು. ಇಲಾಖೆಯ ಉನ್ನತ ಅಧಿಕಾರಿಗಳು, ಮಾನಸಿಕತಜ್ಞರು ಹಾಗೂ ವಿಷಯ ಪರಿಣಿತರು ಅಭ್ಯರ್ಥಿಗಳ ಮೌಖಿಕ ಸಂದರ್ಶನ ನಡೆಸುತ್ತಿದ್ದರು. ಈ ಬಾರಿ ಅಂಥ ಸಂದರ್ಶನ ಇರುವುದಿಲ್ಲ. ಇದು 300 ಹುದ್ದೆಗಳ ನೇಮಕಾತಿಗೆ ಮಾತ್ರ ಅನ್ವಯವಾಗಲಿದೆ. ಇದಕ್ಕೂ ಮುನ್ನ ಹೊರಡಿಸಲಾಗಿರುವ 200 ಹುದ್ದೆಗಳ ನೇಮಕಾತಿಯಲ್ಲಿ ಯಥಾಪ್ರಕಾರ ಸಂದರ್ಶನ ಇರಲಿದೆ' ಎಂದು ಅವರು ಮಾಹಿತಿ ನೀಡಿದರು.

ಜನಸ್ನೇಹಿ ಅಧಿಕಾರಿಗಳ ಕೊರತೆ: 'ಸಂದರ್ಶನ ರದ್ದುಪಡಿಸಿರುವುದು ತಪ್ಪು. ಈ ನಡೆಯಿಂದ ಇಲಾಖೆಯಲ್ಲಿ ಜನಸ್ನೇಹಿ ಅಧಿಕಾರಿಗಳ ಕೊರತೆ ಉಂಟಾಗಲಿದೆ' ಎಂದು ನಿವೃತ್ತ ಡಿಜಿಪಿ ಡಾ. ಡಿ.ವಿ.ಗುರುಪ್ರಸಾದ್ ಆತಂಕ ವ್ಯಕ್ತಪಡಿಸಿದರು.

'ಪಿಎಸ್‌ಐ ಆದವರು ದಿನದ 24 ಗಂಟೆ ಜನರ ಜೊತೆಗೆ ಇರಬೇಕು. ಅಂಥ ಹುದ್ದೆಗೆ ಬರುವ ಅಭ್ಯರ್ಥಿಯ ವ್ಯಕ್ತಿತ್ವ ಹಾಗೂ ಆತನ ಮಾನಸಿಕ ಸಾಮರ್ಥ್ಯವನ್ನು ಮೌಖಿಕ ಸಂದರ್ಶನದಲ್ಲಿ ಪರೀಕ್ಷಿಸಲಾಗುತ್ತದೆ. ಆತ ಜನರ ಜೊತೆ ಹೇಗೆ ನಡೆದುಕೊಳ್ಳುತ್ತಾನೆ, ಕ್ಲಿಷ್ಟ ಸಮಸ್ಯೆಗಳನ್ನು ಹೇಗೆ ಎದುರಿಸುತ್ತಾನೆ, ಆತ ಇಲಾಖೆಗೆ ಸೇರಲು ಅರ್ಹನೇ ಎಂಬಿತ್ಯಾದಿ ಪ್ರಶ್ನೆಗಳಿಗೂ ಉತ್ತರ ಪಡೆಯಲಾಗುತ್ತದೆ' ಎಂದರು.

'ಐಎಎಸ್, ಐಪಿಎಸ್, ಕೆಎಎಸ್ ಹಾಗೂ ಡಿವೈಎಸ್ಪಿ ಹುದ್ದೆಗಳ ನೇಮಕಾತಿಗೆ ಸಂದರ್ಶನ ಇದೆ. ಪಿಎಸ್‌ಐಗೆ ಸಂದರ್ಶನ ರದ್ದುಪಡಿಸಿರುವುದು ಅವೈಜ್ಞಾನಿಕ ಕ್ರಮ. ಪಿಎಸ್‌ಐ ಆದವರೇ ಬಡ್ತಿ ಪಡೆದು ಇನ್‌ಸ್ಪೆಕ್ಟರ್, ಎಸಿಪಿ ಹಾಗೂ ಡಿವೈಎಸ್ಪಿ ಆಗುತ್ತಾರೆಂಬುದನ್ನು ಇಲಾಖೆ ಮರೆತಂತೆ ಕಾಣುತ್ತದೆ' ಎಂದು ಗುರುಪ್ರಸಾದ್ ಹೇಳಿದರು.

'ಪ್ರಭಾವಿಗಳ ಒತ್ತಡ ತಪ್ಪಲಿದೆ'

'ಸಂದರ್ಶನಕ್ಕೆ ಆಯ್ಕೆ ಆಗುವ ಕೆಲ ಅಭ್ಯರ್ಥಿಗಳಿಗೆ 10 ಅಂಕಗಳ ಪೈಕಿ ಹೆಚ್ಚಿನ ಅಂಕ ನೀಡುವಂತೆ ಪ್ರಭಾವಿಗಳ ಒತ್ತಡವೂ ಹೆಚ್ಚಿರುತ್ತದೆ. ಇಂಥ ಸ್ಥಿತಿಯಲ್ಲಿ ಸಂದರ್ಶನವನ್ನು ರದ್ದುಪಡಿಸಿರುವುದು ಒಳ್ಳೆಯದು' ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

'ಸಂದರ್ಶನದಲ್ಲಿ 10ಕ್ಕೆ 10 ಅಂಕ ಪಡೆದವರು ಹುದ್ದೆಗೆ ಆಯ್ಕೆಯಾಗುತ್ತಾರೆಂಬುದು ಸುಳ್ಳು. ದೈಹಿಕ, ಲಿಖಿತ ಹಾಗೂ ವೈದ್ಯಕೀಯ ಪರೀಕ್ಷೆ ನಡೆಯುವುದರಿಂದ ಉತ್ತಮ ಅಭ್ಯರ್ಥಿಯೇ ಇಲಾಖೆಗೆ ಬರುತ್ತಾರೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಪಿಎಸ್‌ಐ ನೇಮಕಾತಿ ಹುದ್ದೆಗಳ ಹಂಚಿಕೆ

205 ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಸಿವಿಲ್)

63 ಮಹಿಳಾ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ (ಸಿವಿಲ್)

32 ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಸಿವಿಲ್) ಸೇವಾನಿರತರು

ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶದನ್ವಯ ಪಿಎಸ್‌ಐ ನೇಮಕಾತಿ ಪ್ರಕ್ರಿಯೆಯಡಿ ನಡೆಸುತ್ತಿದ್ದ ಸಂದರ್ಶನ ರದ್ದುಪಡಿಸಲಾಗಿದೆ

ಟಿ. ಸುನೀಲ್‌ಕುಮಾರ್, ಎಡಿಜಿಪಿ

ಸುದ್ದಿ 2 ನಿಮಿಷ

ರೋಗವಿಲ್ಲ, ಔಷಧ ಪಡೆಯುವ ಅಗತ್ಯ ಇಲ್ಲ: ಸಂದೇಶ್ ನಾಗರಾಜ್

ಬೆಂಗಳೂರು: ಜೆಡಿಎಸ್ ವಿಧಾನ ಪರಿಷತ್ ಸದಸ್ಯರ ಬಂಡಾಯದ ಬಿಸಿ ಏರತೊಡಗಿದ್ದು, ತಾಂತ್ರಿಕವಾಗಿ ಪಕ್ಷದಲ್ಲಿದ್ದರೂ, ಮಾನಸಿಕವಾಗಿ ಪಕ್ಷವನ್ನು ಬಿಟ್ಟಿರುವುದಾಗಿ ಸಂದೇಶ್ ನಾಗರಾಜ್ ಹೇಳಿದ್ದಾರೆ.

'ನಮಗೆ ಯಾವುದೇ ರೋಗವಿಲ್ಲ. ಆದ್ದರಿಂದ ಔಷಧಿ ಪಡೆಯುವ ಅಗತ್ಯವಿಲ್ಲ. ವಿನಾ ಕಾರಣ ತ್ರಿಶಂಕು ಸ್ವರ್ಗದಲ್ಲಿದ್ದೇವೆ. ತಾಂತ್ರಿಕವಾಗಿಯಷ್ಟೇ ಈಗಲೂ ಜೆಡಿಎಸ್‌ನಲ್ಲಿದ್ದೇವೆ. ಕುಮಾರಸ್ವಾಮಿ ಮುಖ್ಯಮಂತ್ರಿಯಾದ 8 ದಿನಕ್ಕೆ ಮಾನಸಿಕವಾಗಿ ಜೆಡಿಎಸ್‌ನಿಂದ ದೂರವಾಗಿದ್ದೆವು' ಎಂದು ಸಂದೇಶ್ ನಾಗರಾಜ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಜೆಡಿಎಸ್‌ಗೂ ನನಗೂ ಯಾವುದೇ ರೀತಿಯ ಸಂಬಂಧವಿಲ್ಲ. ಉಚ್ಚಾಟನೆ ಮಾಡಿದರೆ ತಾಯಿ ಚಾಮುಂಡೇಶ್ವರಿಗೆ 101 ತೆಂಗಿನಕಾಯಿ ಒಡೆಯುವೆ. ಪಕ್ಷದಿಂದ ಗೆದ್ದವ ನಾನಲ್ಲ. ವೈಯಕ್ತಿಕವಾಗಿ ಗೆದ್ದಿದ್ದೆ' ಎಂದು ಅವರು ಹೇಳಿದ್ದಾರೆ.

ಆದರೆ ಪಕ್ಷದಿಂದ ಉಚ್ಚಾಟಿಸದೆ ಹೋದರೆ ಪಕ್ಷ ಬಿಟ್ಟು ಹೋಗುವುದಿಲ್ಲ, 2021ರಲ್ಲಿ ತಮ್ಮ ಅವಧಿ ಕೊನೆಗೊಳ್ಳಲಿದ್ದು, ಅಲ್ಲಿಯವರೆಗೂ ಪಕ್ಷದಲ್ಲಿಯೇ ಮುಂದುವರಿಯುವುದಾಗಿ ಸ್ಪಷ್ಟಪಡಿಸಿದ್ದಾರೆ. ಸದ್ಯಕ್ಕೆ ಯಾವ ಪಕ್ಷ ಸೇರುವ ಬಗ್ಗೆಯೂ ಯೋಚಿಸಿಲ್ಲ, ಸಿನಿಮಾ ನಿರ್ಮಾಣವನ್ನು ಮುಂದುವರಿಸುವುದಾಗಿ ಅವರು ಹೇಳಿದ್ದಾರೆ.

ಮೂರು ಬಾರಿ ವಿಧಾನ ಪರಿಷತ್‌ಗೆ ಆಯ್ಕೆಯಾಗಿದ್ದ ಪುಟ್ಟಣ್ಣ ಅವರನ್ನು ಪಕ್ಷ ಈಚೆಗೆ ಉಚ್ಚಾಟಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಡಿ.1ರಿಂದ ಬೀದರ್‌ಗೆ ಹೊಸ ವಿಮಾನ

ಬೆಂಗಳೂರು: ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ನಿಲ್ದಾಣದಿಂದ ಬೀದರ್ ನಗರಕ್ಕೆ ಡಿಸೆಂಬರ್ 1ರಿಂದ 'ಟ್ರೂಜೆಟ್' ಕಂಪನಿಯ ಹೊಸ ವಿಮಾನ ಹಾರಾಟ ಆರಂಭಿಸಲಿದೆ.

ಅದರ ಜೊತೆಗೆಯೇ ನಿಲ್ದಾಣದಿಂದ ಆರು ಹೊಸ ಮಾರ್ಗಗಳಿಗೆ ವಿಮಾನಗಳು ಹಾರಾಟ ನಡೆಸಲಿದ್ದು, ಎರಡು ನೂತನ ಏರ್‌ಲೈನ್ಸ್‌ಗಳೂ ಸೇವೆ ಆರಂಭಿಸಿವೆ.

'ನಿಲ್ದಾಣದ ಬಳಕೆ ಪ್ರಮಾಣ ಹಾಗೂ ವಿಮಾನಯಾನಗಳ ಲಭ್ಯತೆ ನೋಡಿಕೊಂಡು ಚಳಿಗಾಲದ ವೇಳಾಪಟ್ಟಿಯನ್ನು ಅಂತಿಮಗೊಳಿಸಲಾಗಿದೆ. ಪ್ರಯಾಣಿಕರ ಅನುಕೂಲಕ್ಕಾಗಿ ಹೊಸದಾಗಿ ಅಡ್ಡಿಸ್ ಅಬಾಬಾ, ಆ್ಯಮ್‌ಸ್ಟರ್‌ಡ್ಯಾಮ್, ಜೋಧಪುರ, ಜಾರ್ಸುಗುಡಾ, ಬೀದರ್ ಮತ್ತು ಟುಟಿಕೋರಿನ್ ಮಾರ್ಗಗಳಲ್ಲಿ ಹೊಸ ವಿಮಾನಗಳು ಹಾರಾಟ ನಡೆಸಲಿವೆ. 2020ರ ಮಾರ್ಚ್ 28ರವರೆಗೂ ಈ ಸೇವೆ ಇರಲಿದೆ' ಎಂದು ಮೂಲಗಳು ತಿಳಿಸಿವೆ.

'ಇಥಿಯೋಪಿಯನ್ ಏರ್‌ಲೈನ್ಸ್ ಹಾಗೂ ಕೆಎಲ್‌ಎಂ ರಾಯಲ್ ಡಚ್ ವಿಮಾನಯಾನ ಕಂಪನಿಗಳೂ ನಿಲ್ದಾಣಕ್ಕೆ ಲಗ್ಗೆ ಇಟ್ಟಿವೆ. ಇದು ನಿಲ್ದಾಣದ ಮತ್ತೊಂದು ಮೈಲಿಗಲ್ಲು' ಎಂದು ಮೂಲಗಳು ಹೇಳಿವೆ. 'ಹೊಸ ಮಾರ್ಗಗಳ ಆರಂಭದಿಂದಾಗಿ ನಿಲ್ದಾಣವು 25 ಅಂತರರಾಷ್ಟ್ರೀಯ ಸೇರಿದಂತೆ 82 ಸ್ಥಳಗಳಿಗೆ ಸಂಪರ್ಕ ಸಾಧಿಸುವ ಸಾಮರ್ಥ್ಯ ಹೊಂದಿದೆ' ಎಂದು ಮೂಲಗಳು ತಿಳಿಸಿವೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಐಟಂ ನಂ. 1 ರಿಂದ 7 ರ ಷೆಡ್ಯೂಲ್‌ನಲ್ಲಿ ವಿವರಿಸಿರುವ ಹಾಗು ಈ ಮುಂದೆ **'ಷೆಡ್ಯೂಲ್ ಸ್ವತ್ತು'** ಎಂದು ಕರೆಯಲ್ಪಡುವ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲ ಹೋಬಳಿ ಚಿಕ್ಕಜಾಲ ಗ್ರಾಮದ ಸರ್ವೆ ನಂ. 77/3ಎ, 77/3ಬಿ, 77/4, 77/5, 78/8, 78/10ಎ1 ಹಾಗು 78/10ಬಿ ಒಟ್ಟು ವಿಸ್ತೀರ್ಣ 5 ಎಕರೆ 28 ಗುಂಟೆ ಜಮೀನುಗಳು, ಬೆಂಗಳೂರು – 562 157, ಚಿಕ್ಕಜಾಲ ಗ್ರಾಮ, ಡೆಕತ್ಲಾನ್ ಪಕ್ಕ, ನಂ.81 ಇಲ್ಲಿ ವಾಸವಾಗಿರುವ (1) ಶ್ರೀಮತಿ ರತ್ನಮ್ಮ ಕೊಂ ಲೇಟ್ ರಾಮಕೃಷ್ಣಯ್ಯ; (2) ಶ್ರೀ ಸಿ.ಆರ್.ಸುರೇಶ್ ಬಿನ್ ಲೇಟ್ ರಾಮಕೃಷ್ಣಯ್ಯ; (3) ಶ್ರೀ ಹೇಮಂತ್ ಬಿನ್ ಲೇಟ್ ಮುನಿಯಮ್ಮ, ಹಾಗು ಬೆಂಗಳೂರು – 562 157, ಚಿಕ್ಕಜಾಲ ಗ್ರಾಮ, ಕೆ.ಎಸ್.ಎಸ್.ಕನ್ವೆಂಷನ್ ಸೆಂಟರ್ ಎದುರು ಇಲ್ಲಿ ವಾಸವಾಗಿರುವ (4) ಶ್ರೀ ಸಿ.ಎನ್.ಅಶೋಕ್ ಬಿನ್ ಲೇ ನಾರಾಯಣಪ್ಪ, ಮತ್ತು (5) ಶ್ರೀ ಸಿ.ಎನ್.ರಮೇಶ್ ಬಿನ್ ಲೇ ನಾರಾಯಣಪ್ಪ, **(ಮಾಲೀಕರು)** ಇವರುಗಳಿಗೆ ಸೇರಿದ ಸ್ವತ್ತಾಗಿರುತ್ತದೆ. ನಮ್ಮ ಕಕ್ಷಿದಾರರು ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಈ ಮಾಲೀಕರೊಂದಿಗೆ ಜಂಟಿ ಅಭಿವೃದ್ಧಿ ವ್ಯವಹಾರ ಮಾಡಲು ಇಚ್ಛಿಸಿರುತ್ತಾರೆ.

ಸದರಿ ಮಾಲೀಕರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದ ಹಾಗು ಈ ಕೆಳಗೆ ವಿವರಿಸಿರುವ ಮೂಲ ದಾಖಲಾತಿಗಳು ಕಳೆದಿರುತ್ತವೆ ಎಂದು ಹಾಗು ಇಲ್ಲಿಯತನಕ ಹುಡುಕಿದರು ಸಿಕ್ಕಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಕ್ರಮ ಸಂಖ್ಯೆ	ದಿನಾಂಕ	ದಾಖಲೆಗಳು
1	19.01.2004	ಬೆಂಗಳೂರು, ಯಲಹಂಕ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಪುಸ್ತಕ–1, ಸಿ.ಡಿ.ನಂ.ವೈಎಎನ್‌ಡಿ, ದಾಸ್ತಾವೇಜು ಸಂಖ್ಯೆ 14509/03–04 ರಲ್ಲಿ ನೊಂದಾಯಿತವಾಗಿರುವ ಸರ್ವೆ ನಂ.77/4 ಕ್ಕೆ ಸಂಬಂಧಿಸಿದ ಕ್ರಯ ಪತ್ರ.
2	03.12.2012	ಬೆಂಗಳೂರು, ಯಲಹಂಕ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಪುಸ್ತಕ–1, ಸಿ.ಡಿ.ನಂ.ಜಿಎನ್‌ಆರ್‌ಡಿ58, ದಾಸ್ತಾವೇಜು ಸಂಖ್ಯೆ 1742/12–13 ರಲ್ಲಿ ನೊಂದಾಯಿತವಾಗಿರುವ ಸರ್ವೆ ನಂ.77/4, 77/5, 78/10ಎ1 ಹಾಗು ಸರ್ವೆ ನಂ.78/10ಬಿ ಗೆ ಸಂಬಂಧಿಸಿದ ರದ್ದತಿ ಪತ್ರ.
3	31.10.1956	ದೇವನಹಳ್ಳಿ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಪುಸ್ತಕ–1, ವಾಲ್ಯೂಂ 685, ಪುಟ ಸಂಖ್ಯೆ 160–164, ದಾಸ್ತಾವೇಜು ಸಂಖ್ಯೆ 1684/56–57 ರಲ್ಲಿ ನೊಂದಾಯಿತವಾಗಿರುವ ಸರ್ವೆ ನಂ.78/8 ಕ್ಕೆ ಸಂಬಂಧಿಸಿದ ಕ್ರಯ ಪತ್ರ.
4	23.05.1974	ದೇವನಹಳ್ಳಿ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಪುಸ್ತಕ–1, ವಾಲ್ಯೂಂ 1134, ಪುಸ್ತಕ ಸಂಖ್ಯೆ 64–66, ದಾಸ್ತಾವೇಜು ಸಂಖ್ಯೆ 898/74–75 ರಲ್ಲಿ ನೊಂದಾಯಿತವಾಗಿರುವ ಸರ್ವೆ ನಂ.78/8 ಕ್ಕೆ ಸಂಬಂಧಿಸಿದ ಕ್ರಯ ಪತ್ರ.
5	17.07.2013	ಬೆಂಗಳೂರು, ಗಾಂಧಿನಗರ (ಗಂಗಾನಗರ) ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಪುಸ್ತಕ–1, ಸಿ.ಡಿ.ನಂ.ಜಿಎನ್‌ಆರ್‌ಡಿ69, ದಾಸ್ತಾವೇಜು ಸಂಖ್ಯೆ 1012/13–14 ರಲ್ಲಿ ನೊಂದಾಯಿತವಾಗಿರುವ ಸರ್ವೆ ನಂ.78/8 ಕ್ಕೆ ಸಂಬಂಧಿಸಿದ ಅದಲು–ಬದಲು ಪತ್ರ.

ಈ ಮೇಲೆ ತಿಳಿಸಿದ ಮೂಲ ದಾಖಲಾತಿಗಳು ಕಳೆದು ಹೋಗಿದೆಯೆಂದು ಕ್ರೈಂ ಬ್ರಾಂಚ್ ಬೆಂಗಳೂರು ನಗರ ಪೋಲೀಸ್ ಸ್ಟೇಷನ್ ನಲ್ಲಿ ಮಾಲೀಕರು ದಿನಾಂಕ 07.11.2019 ರಂದು ರಿಪೋರ್ಟ್ ಸಂಖ್ಯೆ 224095/2019 ರಲ್ಲಿ ದೂರು ದಾಖಲಿಸಿರುತ್ತಾರೆ. ಯಾರಿಗಾದರು ಸದರಿ ದಾಖಲೆಗಳು ಸಿಕ್ಕಿದ್ದಲ್ಲಿ ಈ ಕೆಳಗೆ ಸಹಿಮಾಡಿರುವವರಿಗಾಗಲಿ ಅಥವಾ ಮಾಲೀಕರಿಗಾಗಲಿ ತಲುಪಿಸಬೇಕೆಂದು ಈ ಮೂಲಕ ಕೋರುತ್ತೇವೆ.

ಹಾಗು ಸದರಿ ಐಟಂ 1 ರಿಂದ 7 ರ ಷೆಡ್ಯೂಲ್ ಸ್ವತ್ತಿನ ಮೇಲೆ ಅಥವಾ ಅದರ ಯಾವುದೇ ಭಾಗಶಃ ಸ್ವತ್ತಿನ ಮೇಲೆ ಯಾವುದೇ ರೀತಿಯಲ್ಲಿ ಹಕ್ಕು ಪ್ರತಿಪಾದನೆ, ಮಾಲೀಕತ್ವ, ಆಸಕ್ತಿ ಹೊಂದಿರುವ ಅಥವಾ ದಾಖಲೆಗಳ ಬಗ್ಗೆ ಅಥವಾ ಮಾಲೀಕರ ವಿರುದ್ಧ ಯಾವುದೇ ರೀತಿಯಲ್ಲಿ ಹಕ್ಕು ಪ್ರತಿಪಾದನೆ ಮಾಡಲಿಚ್ಛಿಸುವ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಇದ್ದಲ್ಲಿ, ಅಥವಾ ಸದರಿ ಸ್ವತ್ತಿನ ಜಂಟಿ ಅಭಿವೃದ್ಧಿ ವ್ಯವಹಾರದ ವಿರುದ್ಧ ಆಕ್ಷೇಪಣೆ ಇದ್ದಲ್ಲಿ, ಸದರಿ ಐಟಂ 1 ರಿಂದ 7 ರ ಷೆಡ್ಯೂಲ್ ಸ್ವತ್ತಿನ ಮೇಲೆ ತಾವು ಯಾವ ಆಧಾರದ ಮೇಲೆ ಅಂತಹ ಹಕ್ಕು ಪ್ರತಿಪಾದನೆ, ಮಾಲೀಕತ್ವ, ಆಸಕ್ತಿ ಹೊಂದಿದ್ದಾರೆ ಎಂಬುದರ ಬಗ್ಗೆ ಅಸಲಿ ಅಥವಾ ಇನ್ನಾವುದೇ ದಾಖಲೆ/ಗಳ ಸಹಿತ, ಈ ಸಾರ್ವಜನಿಕ ಸೂಚನೆ ಪ್ರಕಟಗೊಂಡ ಹತ್ತು (10) ದಿನಗಳೊಳಗೆ ಕೆಳಗೆ ಸಹಿ ಮಾಡಿರುವವರಿಗೆ ಲಿಖಿತ ರೂಪದಲ್ಲಿ ತಿಳಿಸಬೇಕು. ತದನಂತರ, ನಮ್ಮ ಕಕ್ಷಿದಾರರು ಯಾವುದೇ ಆಕ್ಷೇಪಣೆ ಅಥವಾ ಹಕ್ಕು ಪ್ರತಿಪಾದನೆಗಳು ಇಲ್ಲವೆಂದು ಪರಿಗಣಿಸಿ ಸದರಿ ಐಟಂ 1 ರಿಂದ 7 ರ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಜಂಟಿ ಅಭಿವೃದ್ಧಿ ವ್ಯವಹಾರವನ್ನು ಮುಂದುವರೆಸುವರು.

ಷೆಡ್ಯೂಲ್ ಸ್ವತ್ತು

ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲಾ ಹೋಬಳಿ, ಚಿಕ್ಕಜಾಲ ಗ್ರಾಮದ ಈ ಕೆಳಗೆ ವಿವರಿಸಿರುವ ಐಟಂ 1 ರಿಂದ ಐಟಂ 7 ತೋರಿಸಿರುವ ಸರ್ವೆನಂಬರ್ ಜಮೀನಿಗೆ ಚಕ್ಕುಬಂದಿ:–

ಐಟಂ ನಂ.	ಸರ್ವೆ ನಂ.	ವಿಸ್ತೀರ್ಣ ಎ	ವಿಸ್ತೀರ್ಣ ಗು	ಚಕ್ಕುಬಂದಿ ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
01	77/3ಎ	--	19	ನಾಲಾ	ಸರ್ವೆ ನಂ.77/3ಬಿ	ಸರ್ವೆ ನಂ.77/1	ಸರ್ವೆ ನಂ.77/4
02	77/3ಬಿ	--	19	ಸರ್ವೆ ನಂ.77/3ಎ	ಸರ್ವೆ ನಂ.78	ಸರ್ವೆ ನಂ.77/1	ಸರ್ವೆ ನಂ.77/4
03	77/4	2	34	ನಾಲಾ	ಸರ್ವೆ ನಂ.78	ಸರ್ವೆ ನಂ. 77/3ಎ ಮತ್ತು 77/3ಬಿ	ಸರ್ವೆ ನಂ.77/5
04	77/5	1	9	ನಾಲಾ	ಸರ್ವೆ ನಂ.78	ಸರ್ವೆ ನಂ.77/4	ರಸ್ತೆ ಮತ್ತು ಸರ್ವೆ ನಂ.77/6
05	78/8	--	10	ಸರ್ವೆ ನಂ.78/10ಎ1 ಮತ್ತು 78/10ಬಿ	ಸರ್ವೆ ನಂ.79	ಸರ್ವೆ ನಂ.78/7	ಸರ್ವೆ ನಂ.78/9
06	78/10ಎ1	--	15	ಸರ್ವೆ ನಂ.77/4 ಮತ್ತು ಸರ್ವೆ ನಂ.77/5	ಸರ್ವೆ ನಂ.78/9 ಮತ್ತು ಸರ್ವೆ ನಂ.78/8	ಸರ್ವೆ ನಂ. 78/10ಬಿ ಮತ್ತು ಸರ್ವೆ ನಂ.78/5ಬಿ	ಸರ್ವೆ ನಂ. 78/10ಎ2
07	78/10ಬಿ	--	2	ಸರ್ವೆ ನಂ. 78/10ಎ1	ಸರ್ವೆ ನಂ.78/8	ಸರ್ವೆ ನಂ. 78/5ಬಿ	ಸರ್ವೆ ನಂ. 78/10ಎ1
ಒಟ್ಟು		5	28				

ಗೆರಾಲ್ಡ್ ಮನೋಹರನ್, ಪಾಲುದಾರರು, ಜೆ.ಸಾಗರ್ ಅಸೋಸಿಯೇಟ್ಸ್, ಅಡ್ವೋಕೇಟ್ಸ್, ಲೆವೆಲ್ 3, ಪ್ರೆಸ್ಟೀಜ್ ಒಬೆಲಿಸ್ಕ್, 3, ಕಸ್ತೂರಬ ರಸ್ತೆ, ಬೆಂಗಳೂರು – 560 001. ದೂ: 080–43503600

ಸ್ಮಾರ್ಟ್ ಆಗಲಿವೆ 36 ರಸ್ತೆಗಳು

ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ ಸಿ.ಎಂ ಯಡಿಯೂರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಶನಿವಾರ ಚಾಲನೆ ನೀಡಿದರು. ಪ್ರಮುಖವಾಗಿ ಡಾ. ಮುತ್ತುರಾಜ್ ಕೆಳಸೇತುವೆಯನ್ನು ಸಂಚಾರಕ್ಕೆ ಮುಕ್ತಗೊಳಿಸಲಾಯಿತು. ಜತೆಗೆ, ಸ್ಮಾರ್ಟ್ ಸಿಟಿ ಯೋಜನೆಯ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಲಾಯಿತು.

'ಸ್ಮಾರ್ಟ್ ಸಿಟಿ ಯೋಜನೆಯಡಿ ನಗರದ ಕೇಂದ್ರ ಭಾಗವನ್ನು ಅಭಿವೃದ್ಧಿಗೊಳಿಸುವ ಉದ್ದೇಶವಿದೆ. ಈ ನಿಟ್ಟಿನಲ್ಲಿ ನಗರದ 36 ರಸ್ತೆಗಳನ್ನು ಟೆಂಡರ್‌ಶ್ಯೂರ್ ಮಾದರಿಯಲ್ಲಿ ಸ್ಮಾರ್ಟ್ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗುವುದು' ಎಂದು ಯಡಿಯೂರಪ್ಪ ಹೇಳಿದರು.

'ಮೊದಲ ಹಂತದಲ್ಲಿ 20 ರಸ್ತೆಗಳು ಮತ್ತು ಎರಡನೇ ಹಂತದಲ್ಲಿ 16 ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗುವುದು. ಒಟ್ಟು ₹434 ಕೋಟಿ ವೆಚ್ಚದಲ್ಲಿ 29.67 ಕಿ.ಮೀ. ಉದ್ದದ ರಸ್ತೆಗಳನ್ನು ಸ್ಮಾರ್ಟ್ ಮಾಡಲಾಗುವುದು' ಎಂದು ತಿಳಿಸಿದರು.

ಸಂಚಾರ ದಟ್ಟಣೆ ಸಮಸ್ಯೆಗೆ ಪರಿಹಾರ: 'ನಾಲ್ಕು ಪಥಗಳ ಡಾ. ಮುತ್ತುರಾಜ್ ಕೆಳಸೇತುವೆ ದ್ವಿಮುಖ ಸಂಚಾರ ಒಳಗೊಂಡಿದೆ. ಈ ಭಾಗದ ಸಂಚಾರ ದಟ್ಟಣೆ ಸಮಸ್ಯೆ ಇದರಿಂದ ನೀಗಲಿದೆ' ಎಂದು ಹೇಳಿದರು.

ಬೆಂಗಳೂರು ಮೈಸೂರು ರಸ್ತೆಯಿಂದ ಸಿಲ್ಕ್‌ಬೋರ್ಡ್ ಜಂಕ್ಷನ್‌ವರೆಗೆ ಹೊರವರ್ತುಲ ರಸ್ತೆಯಲ್ಲಿನ ಡಾ. ಮುತ್ತುರಾಜ್ ವೃತ್ತದಲ್ಲಿ ಈ ಕೆಳಸೇತುವೆಯನ್ನು ನಿರ್ಮಿಸಲಾಗಿದೆ. ಮೈಸೂರು ರಸ್ತೆ ಕಡೆಯಿಂದ ಬನಶಂಕರಿ, ಕನಕಪುರ ರಸ್ತೆ, ಜೆ.ಪಿ. ನಗರ, ಜಯನಗರದ ಬನ್ನೇರುಘಟ್ಟ ರಸ್ತೆ, ಬಿ.ಟಿ.ಎಂ. ಲೇಔಟ್ ಹಾಗೂ ಸೆಂಟ್ರಲ್ ಸಿಲ್ಕ್ ಬೋರ್ಡ್ ನಡುವೆ ಸಂಚರಿಸುವವರು ಈ ಕೆಳಸೇತುವೆಯನ್ನು ಬಳಸಬಹುದು.

ಅಭಿವೃದ್ಧಿ ಕಾಮಗಾರಿಗಳಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಚಾಲನೆ ನೀಡಿದರು. (ಎಡದಿಂದ) ಉಪ ಮೇಯರ್ ಸಿ.ಆರ್. ರಾಮಮೋಹನ ರಾಜು, ಶಾಸಕ ಎಸ್.ಆರ್. ವಿಶ್ವನಾಥ್, ಸಂಸದ ಪಿ.ಸಿ ಮೋಹನ್, ಕಂದಾಯ ಸಚಿವ ಆರ್. ಅಶೋಕ, ಮೇಯರ್ ಎಂ. ಗೌತಮ್ ಕುಮಾರ್, ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ ಮತ್ತು ವಸತಿ ಸಚಿವ ವಿ. ಸೋಮಣ್ಣ ಇದ್ದರು ಪ್ರಜಾವಾಣಿ ಚಿತ್ರ

'ಸ್ಮಾರ್ಟ್' ರಸ್ತೆಯ ಪ್ರಮುಖ ಅಂಶಗಳು

- ಪಾದಚಾರಿ ಮಾರ್ಗದಲ್ಲಿ ಪ್ರತ್ಯೇಕ ಕೊಳವೆ
- ಏಕರೀತಿಯ ರಸ್ತೆ ಮಾರ್ಗದಿಂದ ತಡೆರಹಿತ ಸಂಚಾರ
- ಸುಧಾರಿತ ಸಂಚಾರ ನಿರ್ವಹಣಾ ಸಾಮರ್ಥ್ಯ
- ಹೊಸ ಪಾದಚಾರಿ ಸ್ನೇಹಿ ಮಾರ್ಗ
- ಬೊಲ್ಲಾರ್ಡ್ಸ್‌ಗಳ ಅಳವಡಿಕೆ
- ಲ್ಯಾಂಡ್‌ಸ್ಕೇಪಿಂಗ್ ಮತ್ತು ಬೀದಿ ದೀಪ
- ವಾಹನ ನಿಲುಗಡೆಗೆ ಸ್ಥಳ ನಿಗದಿ

ಸಿಗ್ನಲ್ ಮುಕ್ತ ಜಂಕ್ಷನ್: ವಾಟಾಳ್ ನಾಗರಾಜ್ ರಸ್ತೆ ಮತ್ತು ಮಾಗಡಿ ಡಿವೈಷನ್ ರಸ್ತೆಯಲ್ಲಿ ಮೇಲ್ಸೇತುವೆ ಮತ್ತು ಕೆಳಸೇತುವೆ ಒಳಗೊಂಡ ಗ್ರೇಟ್ ಸಪರೇಟರ್ ಕಾಮಗಾರಿಗೂ ಯಡಿಯೂರಪ್ಪ ಶಂಕುಸ್ಥಾಪನೆ ನೆರವೇರಿಸಿದರು. ₹30 ಕೋಟಿ ವೆಚ್ಚದಲ್ಲಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

ಡಾಂಬರು ಮಿಶ್ರಣ ಘಟಕ: ನಗರದ ರಸ್ತೆಗಳಲ್ಲಿನ ಗುಂಡಿ ಮುಚ್ಚಲು ಮತ್ತು ರಸ್ತೆ ದುರಸ್ತಿಯ ಉದ್ದೇಶದಿಂದ ಡಾಂಬರು ಮಿಶ್ರಣ ಘಟಕವನ್ನು ಸ್ಥಾಪಿಸಲಾಗಿದೆ. ಇದರ ಕಾರ್ಯಾರಂಭಕ್ಕೂ ಚಾಲನೆ ನೀಡಲಾಯಿತು.

ಮುಖ್ಯಾಂಶಗಳು
- ₹434 ಕೋಟಿ ವೆಚ್ಚ
- ಮೊದಲ ಹಂತದಲ್ಲಿ 20 ರಸ್ತೆಗಳ ಅಭಿವೃದ್ಧಿ

ಮುತ್ತುರಾಜ್ ಕೆಳಸೇತುವೆ

₹18.72 ಕೋಟಿ ನಿರ್ಮಾಣ ವೆಚ್ಚ

284 ಮೀಟರ್ ಉದ್ದ

5.50 ಮೀಟರ್ ಎತ್ತರ

2x75 ಮೀಟರ್ ಅಗಲ (ದ್ವಿಮುಖ ಸಂಚಾರ)

ಬಿದರಹಳ್ಳಿ ಹೋಬಳಿ ಪ್ರದೇಶದಲ್ಲಿ ₹7.35 ಕೋಟಿ ವೆಚ್ಚದಲ್ಲಿ ಈ ಘಟಕವನ್ನು ಸ್ಥಾಪಿಸಲಾಗಿದೆ.

ಚಿತ್ರಾವಳಿ

ಲೋಕೋಪಯೋಗಿ ಇಲಾಖೆ ವತಿಯಿಂದ ನೆಲಮಂಗಲ ಪಟ್ಟಣದ ಮುಖ್ಯರಸ್ತೆಯಲ್ಲಿ ₹4.5 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಿರುವ ಡಾಂಬರೀಕರಣ, ಪಾದಚಾರಿ ಮಾರ್ಗ ನಿರ್ಮಾಣ, ಬೀದಿದೀಪ ಅಳವಡಿಕೆ ಕಾಮಗಾರಿಗೆ ಶಾಸಕ ಡಾ.ಕೆ.ಶ್ರೀನಿವಾಸಮೂರ್ತಿ ಚಾಲನೆ ನೀಡಿದರು. ಪುರಸಭೆ ಸದಸ್ಯರು ಮತ್ತು ಮುಖಂಡರು ಇದ್ದಾರೆ.

ಪಟ್ಟಣಗೆರೆಯ ಕರ್ನಾಟಕ ಸಂಸ್ಕೃತಿ ವಿದ್ಯಾಪೀಠದಲ್ಲಿ ಹಮ್ಮಿಕೊಂಡಿದ್ದ ಕನ್ನಡ ನುಡಿ ಹಬ್ಬ ಕಾರ್ಯಕ್ರಮದಲ್ಲಿ ಮಹಿಳೆಯರು ರಂಗೋಲಿ ಬಿಡಿಸಿದರು.

ಡಿ.11ರಿಂದ ಶಾಲಾ ಲಸಿಕಾ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಡಿ. 11ರಿಂದ ಡಿ.31ರವರೆಗೆ ರಾಜ್ಯದ ಎಲ್ಲ ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ಶಾಲಾ ಲಸಿಕಾ ಅಭಿಯಾನ ಹಮ್ಮಿಕೊಂಡಿದೆ.

ಈ ಅಭಿಯಾನದ ಮೂಲಕ 62 ಲಕ್ಷ ಮಕ್ಕಳನ್ನು ತಲುಪುವ ಗುರಿಯನ್ನು ಇಲಾಖೆ ಹಾಕಿಕೊಂಡಿದೆ.

'ಹುಟ್ಟಿದ ಮಗುವಿನಿಂದ ಹಿಡಿದು 16 ವರ್ಷದವರೆಗಿನ ಮಕ್ಕಳಿಗೆ ವಿವಿಧ ಲಸಿಕೆಗಳನ್ನು ನೀಡಲಾಗುತ್ತಿದೆ. ಒಂದೂವರೆ ವರ್ಷದ ಬಳಿಕ 5ರಿಂದ 6 ವರ್ಷ ಇರುವಾಗ ಡಿಪಿಟಿ ವರ್ಧಕ ಲಸಿಕೆ ನೀಡಬೇಕಾಗುತ್ತದೆ. ಈ ಲಸಿಕೆಯನ್ನು ಕೆಲ ಪಾಲಕರು ಮರೆತು ಬಿಡುತ್ತಾರೆ. ಹಾಗಾಗಿ, ಶಾಲಾ ಲಸಿಕಾ ಅಭಿಯಾನ ಆರಂಭಿಸಲಾಗುತ್ತಿದೆ' ಎಂದು ಇಲಾಖೆಯ ಲಸಿಕಾ ವಿಭಾಗದ ಉಪನಿರ್ದೇಶಕಿ ಡಾ.ಬಿ.ಎನ್. ರಜನಿ ತಿಳಿಸಿದರು.

ದ್ವಿತೀಯ ಪಿಯು ಆನ್‌ಲೈನ್ ಪ್ರಶ್ನೆಪತ್ರಿಕೆ ಇಲ್ಲ

ಬೆಂಗಳೂರು: ಈ ಬಾರಿಯ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಆನ್‌ಲೈನ್‌ನಲ್ಲಿ ಮೂಲಕ ಪ್ರಶ್ನೆಪತ್ರಿಕೆ ರವಾನಿಸುವುದು ಸಾಧ್ಯವಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಈ ವಿಷಯ ತಿಳಿಸಲಾಯಿತು ಎಂದು ಮೂಲಗಳು ತಿಳಿಸಿವೆ. 2018ರ ದ್ವಿತೀಯ ಪಿಯು ಸಿಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಸರ್ಕಾರಿ ಕಾಲೇಜೊಂದರಲ್ಲಿ ಈ ಪ್ರಯೋಗವನ್ನು ಯಶಸ್ವಿಯಾಗಿ ನಡೆಸಲಾಗಿತ್ತು. ಆದರೆ ಅದು ಅಂತಿಮ ಪರೀಕ್ಷೆಯಲ್ಲಿ ಜಾರಿಗೆ ಬರಲಿಲ್ಲ.

'ನಿರಂತರ ವಿದ್ಯುತ್ ಪೂರೈಕೆ, ಶೇ 100ರಷ್ಟು ವಿದ್ಯುತ್ ಬ್ಯಾಕ್‌ಅಪ್, ಇಂಟರ್‌ನೆಟ್, ಫೋಟೊಕಾಪಿ ಯಂತ್ರ ಸಹಿತ ಸೌಲಭ್ಯಗಳು ಬೇಕು. ಈ ವರ್ಷ ಅದನ್ನು ವ್ಯವಸ್ಥೆ ಮಾಡುವುದು ಸಾಧ್ಯವಿಲ್ಲ' ಎಂದು ಹೇಳಿದ ಅಧಿಕಾರಿಗಳು ಆನ್‌ಲೈನ್ ವ್ಯವಸ್ಥೆ ಸದ್ಯಕ್ಕೆ ಅಸಾಧ್ಯ ಎಂದಿದ್ದಾರೆ.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್

TeamLease® Putting India to Work

ನೋಂದಾಯಿತ ಕಚೇರಿ: 6ನೆಯ ಮಹಡಿ, ಬಿಎಂಟಿಸಿ ವಾಣಿಜ್ಯ ಸಂಕೀರ್ಣ, 80 ಅಡಿ ರಸ್ತೆ, ಕೋರಮಂಗಲ, ಬೆಂಗಳೂರು–560095.
CIN: L74140KA2000PLC118395 | ಈ–ಮೇಲ್: corporateaffairs@teamlease.com
ವೆಬ್‌ಸೈಟ್: www.teamleasegroup.com

2019ರ ಸೆಪ್ಟೆಂಬರ್ 30ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ಅರ್ಧ ವರ್ಷಕ್ಕೆ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಸಾರಾಂಶ

(ಶೇರು ತಲಾವಾರು ದತ್ತವನ್ನು ಹೊರತುಪಡಿಸಿ ಉಳಿದ ಅಂಕಿಗಳು ಲಕ್ಷ ರೂಪಾಯಿಗಳಲ್ಲಿ)

ವಿವರಗಳು	ಏಕಿಕೃತ 30.09.2019ಕ್ಕೆ ಕೊನೆಯಾದ 3 ತಿಂಗಳಿಗೆ	ಏಕಿಕೃತ 30.09.2018ಕ್ಕೆ ಕೊನೆಯಾದ 3 ತಿಂಗಳಿಗೆ	ಕ್ರೋಢೀಕೃತ 30.09.2019ಕ್ಕೆ ಕೊನೆಯಾದ 3 ತಿಂಗಳಿಗೆ	ಕ್ರೋಢೀಕೃತ 30.09.2018ಕ್ಕೆ ಕೊನೆಯಾದ 3 ತಿಂಗಳಿಗೆ
	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ
ಕಾರ್ಯಾಚರಣೆಗಳಿಂದ ಒಟ್ಟು ಆದಾಯ	1,16,535.12	1,01,446.86	1,26,779.59	1,09,065.80
ಸದರಿ ಅವಧಿಗೆ ತೆರಿಗೆಗೆ ಮುನ್ನ ನಿವ್ವಳ ಲಾಭ / (ನಷ್ಟ)*	2,298.21	2,319.34	1,950.50	2,368.90
ಸದರಿ ಅವಧಿಗೆ ತೆರಿಗೆಗೆ ನಂತರ ನಿವ್ವಳ ಲಾಭ / (ನಷ್ಟ) *	2,268.74	2,351.35	2,015.18	2,493.20
ಸದರಿ ಅವಧಿಗೆ ಒಟ್ಟು ಸಮಗ್ರವಾದ ಆದಾಯ [ಸದರಿ ಅವಧಿಗೆ ತೆರಿಗೆ ಕಳೆದ ನಂತರದ ಲಾಭ / (ನಷ್ಟ) ಸೇರಿದಂತೆ ಮತ್ತು ಇತರೆ ಸಮಗ್ರ ಆದಾಯ (ತೆರಿಗೆ ಕಳೆದು)]	2,285.98	2,350.50	1,988.03	2,492.78
ಪೇಯ್ಡ್–ಅಪ್ ಇಕ್ವಿಟಿ ಶೇರು ಬಂಡವಾಳ (ಮುಖ ಬೆಲೆ ತಲಾ 10 ರೂ.)	1,709.68	1,709.68	1,709.68	1,709.68
ಮೀಸಲುಗಳು (ಮರುಮೌಲ್ಯಮಾಪನ ಮೀಸಲುಗಳನ್ನು ಬಿಟ್ಟು) – ಹಿಂದಿನ ಲೆಕ್ಕ ವರ್ಷದ ಬ್ಯಾಲೆನ್ಸ್ ಷೀಟ್ ಪ್ರಕಾರ	51,183.32	41,556.43	52,201.90	42,457.04
ತಲಾ ಶೇರಿಗೆ ಗಳಿಕೆ (ಮುಖ ಬೆಲೆ ತಲಾ 10 ರೂ.) (ವಾರ್ಷಿಕೀಕರಣಗೊಂಡಿಲ್ಲ)				
(ಎ) ಮೂಲ (ರೂ.)	13.27	13.75	11.79	14.58
(ಬಿ) ಡೈಲ್ಯೂಟೆಡ್ (ರೂ.)	13.27	13.75	11.79	14.58

* ಮೇಲೆ ವರದಿ ಮಾಡಿರುವ ಅವಧಿಗಳಿಗೆ ಯಾವುದೇ ಅಸಾಮಾನ್ಯ ಮತ್ತು/ಯಾ ಅಸಾಧಾರಣ ಐಟಂ ಇರಲಿಲ್ಲ.

ಮೇಲಿನ ಹೇಳಿಕೆಯು ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದಾಖಲಿಸಿರುವ, ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಪ್ರಕಟಿಸಬೇಕಾದ ಅಗತ್ಯತೆಗಳು) ವಿಧಾಯಕಗಳು, 2015ರ ("ವಿಧಾಯಕಗಳು") ವಿಧಾಯಕ 33ರ ಅಡಿಯಲ್ಲಿ ಪ್ರಕಟವಾಗಿರುವ, 2019ರ ಸೆಪ್ಟೆಂಬರ್ 30ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ಅರ್ಧವಾರ್ಷಿಕದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪದ ಸಾರಾಂಶವಾಗಿದೆ. ಪರಿಶೋಧಿತ ಬಿಡಿ ಮತ್ತು ಕ್ರೋಢೀಕೃತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪವು ಸ್ಟಾಕ್ ಎಕ್ಸ್‌ಚೇಂಜುಗಳ ವೆಬ್‌ಸೈಟುಗಳಲ್ಲಿ BSE ವೆಬ್‌ಸೈಟ್ (www.bseindia.com) ಮತ್ತು NSE ವೆಬ್‌ಸೈಟ್ (www.nseindia.com) ಮತ್ತು ಕಂಪನಿಯ ವೆಬ್‌ಸೈಟ್ (www.teamleasegroup.com) ನಲ್ಲಿ ಲಭ್ಯವಿದೆ.

ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಪ್ರಕಟಿಸಬೇಕಾದ ಅಗತ್ಯತೆಗಳು) ವಿಧಾಯಕಗಳು, 2015ರ ವಿಧಾಯಕ 33ರ ಪ್ರಕಾರ ಕಂಪನಿಯ ಮೇಲೆ ಹೇಳಿರುವ 2019ರ ಸೆಪ್ಟೆಂಬರ್ 30ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ಅರ್ಧವಾರ್ಷಿಕದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ಲೆಕ್ಕಪತ್ರ ಪರಿಶೋಧನಾ ಸಮಿತಿಯು ವಿಮರ್ಶಿಸಿದ್ದು, ಅದರ ಶಿಫಾರಸುಗಳನ್ನು ನಿರ್ದೇಶಕ ಮಂಡಳಿಯು 2019ರ ನವೆಂಬರ್ 8ರಂದು ನಡೆದ ತನ್ನ ಸಭೆಯಲ್ಲಿ ಅನುಮೋದಿಸಿದೆ. ಸ್ವತಂತ್ರ ಲೆಕ್ಕಪರಿಶೋಧಕರಿಂದ ನೀಡಲ್ಪಟ್ಟ ಪ್ರತ್ಯೇಕಿತ ಮತ್ತು ಕ್ರೋಢೀಕೃತ ಫಲಿತಾಂಶಗಳ ಪರಿಮಿತ ಪರಿಶೀಲನಾ ವರದಿಯ ಪ್ಯಾರಾ 4 ಮತ್ತು ಪ್ಯಾರಾ 5 ಕ್ರಮವಾಗಿ, ಗಮನವನ್ನು ಸೆಳೆಯಲಾಗುತ್ತಿದ್ದು, ವರದಿಯಲ್ಲಿ ಲೆಕ್ಕ ಪರಿಶೋಧಕರು ಯಾವುದೇ ಆಡಿಟ್ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ ಶಾಸನಬದ್ಧ ಲೆಕ್ಕ ಪರಿಶೋಧಕರು ಕಂಪನಿಯ, ಮೇಲೆ ಹೇಳಿರುವ, 2019ರ ಸೆಪ್ಟೆಂಬರ್ 30ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ಅರ್ಧವಾರ್ಷಿಕದ ಆರ್ಥಿಕ ಫಲಿತಾಂಶಗಳ ಪರಿಶೋಧನೆ ಮಾಡಿದ್ದಾರೆ.

ಸದರಿ ಆರ್ಥಿಕ ಫಲಿತಾಂಶಗಳನ್ನು ಕಂಪನಿಗಳ ಅಧಿನಿಯಮ, 2013ರ 133ನೇ ಕಲಮಿನ ಅಡಿಯಲ್ಲಿ ಮತ್ತು ಅದರ ಅಡಿಯಲ್ಲಿ ಹೊರಡಿಸಿರುವ ಸಂಬಂಧಪಟ್ಟ ನಿಯಮಾವಳಿಗಳ ಜೊತೆ ಓದಿಕೊಂಡಂತೆ ನಿಗದಿಪಡಿಸಿರುವ, ಅನ್ವಯವಾಗುವ ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್ (IND-AS) ನಲ್ಲಿ ವಿಧಿಸಿರುವ ರೆಕಗ್ನಿಷನ್ ಮತ್ತು ಮೆಷರ್‌ಮೆಂಟ್ (ಪರಿಶೀಲನೆ ಮತ್ತು ಮಾಪನ) ತತ್ವಗಳ ಪ್ರಕಾರ ಸಿದ್ಧಪಡಿಸಲಾಗಿದೆ.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್ ನಿರ್ದೇಶಕ ಮಂಡಲಿಗಾಗಿ, ಮತ್ತು ಅದರ ಪರವಾಗಿ
(ಸಹಿ/–)
ಅಶೋಕ್ ಕುಮಾರ್ ನೆಡುರುಮಲ್ಲಿ
ವ್ಯವಸ್ಥಾಪಕ ನಿರ್ದೇಶಕರು
DIN: 00151814

ದಿನಾಂಕ: 08ನೇ ನವೆಂಬರ್ 2019
ಸ್ಥಳ: ಬೆಂಗಳೂರು

ಮಹಿಳಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ: ನಂ. 14, ಸೌತ್ ಎಂಡ್ ರಸ್ತೆ ಶೇಷಾದ್ರಿಪುರಂ, ಬೆಂಗಳೂರು – 560 020.
ದೂರವಾಣಿ : 2356 2229, ಮೊಬೈಲ್ : 9880453464.

ಬಹಿರಂಗ ಹರಾಜು ನೋಟೀಸು

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಮಹಿಳಾ ಕೋ–ಆಪರೇಟಿವ್ ಬ್ಯಾಂಕ್ ಮತ್ತೀಕೆರೆ, ಶಾಖೆಯಿಂದ ಸಾಲ ಪಡೆದು ಸುಸ್ತಿದಾರರಾಗಿ ಡಿಕ್ರಿಯಾಗಿರುವ ಈ ಕೆಳಗೆ ನಮೂದಿಸಿರುವವರ ಸ್ಥಿರ ಸ್ವತ್ತುಗಳನ್ನು ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲಾಗುವುದು. ಕೊಳ್ಳಲು ಇಚ್ಛೆಯುಳ್ಳವರು ಕೆಳಗೆ ನಮೂದಿಸಿರುವ ದಿನಾಂಕ ಮತ್ತು ಸ್ಥಳದಲ್ಲಿ ಹಾಜರಿದ್ದು ಕರ್ನಾಟಕ ಸಹಕಾರ ಸಂಘಗಳ ನಿಯಮ 38 ರ ಮೇರೆಗೆ ಮಾರಾಟ ವಾಡಿಕೆಯಲ್ಲಿರುವ ಪರತ್ತಿಗೊಳಪಟ್ಟು ಬಿಡ್ ಮೂಲಕ ಪಡೆಯಬಹುದು.

ಕ್ರ ಸಂ	ಬಾಕಿದಾರರ ಹೆಸರು ಮತ್ತು ವಿಳಾಸ	ಸಿ.ಇ.ಪಿ ಸಂಖ್ಯೆ	ಹರಾಜು ಮಾಡುವ ಆಸ್ತಿಯ ವಿವರ	ಹರಾಜು ಮಾಡುವ ಸ್ಥಳ	ಹರಾಜಿನ ದಿನಾಂಕ ಹಾಗೂ ವೇಳೆ	ಬರಬೇಕಾದ ಮೊಬಲಗು
1	ಶ್ರೀಮತಿ.ಶೋಭಾವತಿ ಬಾಯಿ, ಕೋಂ ಶ್ರೀನಿವಾಸ್ ರಾವ್ ನಂ.06, 4ನೇ ಮುಖ್ಯ ರಸ್ತೆ, 4ನೇ ಅಡ್ಡರಸ್ತೆ, ಬಿ.ಕೆ.ನಗರ, ಯಶವಂತಪುರ, ಬೆಂಗಳೂರು–22.	ಎಆರ್‌ಇ/ ಯುಬಿಎಫ್ /96/ 2014–15	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ 3ನೇ ವಾರ್ಡ್ ಬೆಂಗಳೂರು ಸಿಟಿ, ಯಶವಂತಪುರ ಗ್ರಾಮ, ಹಾಲಿ ಬಿ.ಕೆ ನಗರ 4ನೇ ಮುಖ್ಯರಸ್ತೆಯಲ್ಲಿರುವ ಪಿಐಡಿ.ಸಂಖ್ಯೆ: 3–102–6 ರಲ್ಲಿ ದಾಖಲಾಗಿರುವ 6ನೇ ನಂಬರುಳ್ಳ ಸ್ಥಿರಾಸ್ತಿ, ಬೆಂಗಳೂರು–22. **ಅಳತೆ ಮತ್ತು ಚೆಕ್ಕು ಬಂದಿ** ಪೂರ್ವದಿಂದ ಪಶ್ಚಿಮ (25 + 26)/2 ಅಡಿಗಳು, ಉತ್ತರದಿಂದ ದಕ್ಷಿಣ (26 + 40)/2 ಅಡಿಗಳು ಪೂರ್ವಕ್ಕೆ : ದೇರೆಯವರ ಖಾಸಗಿ ಸ್ವತ್ತು ಪಶ್ಚಿಮಕ್ಕೆ : ಮಹದೇವರವರ ಸ್ವತ್ತು ಉತ್ತರಕ್ಕೆ : ಶಿವಪ್ಪರವರ ಸ್ವತ್ತು ದಕ್ಷಿಣಕ್ಕೆ : ರಸ್ತೆ	ನಂ.06, ಪಿಐಡಿ.ಸಂಖ್ಯೆ: 3–102–6, 4ನೇ ಮುಖ್ಯ ರಸ್ತೆ, ಬಿ.ಕೆ.ನಗರ, ಯಶವಂತಪುರ, ಬೆಂಗಳೂರು–22. (ಸ್ಥಿರಾಸ್ತಿಯ ಹತ್ತಿರದಲ್ಲಿ)	ದಿನಾಂಕ 12.11.2019 ಮಂಗಳವಾರ ಬೆಳಿಗ್ಗೆ 11.00 ಘಂಟೆಯಿಂದ	ರೂ.40,30,902/– ಮತ್ತು ದಿನಾಂಕ 21.09.2019 ರಿಂದ ಮುಂದುವರಿದ ಬಡ್ಡಿ ಹಾಗೂ ಇತರೆ ಖರ್ಚುಗಳು

ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ಹೆಚ್ಚಿನ ವಿವರಗಳನ್ನು ಮಾರಾಟಾಧಿಕಾರಿಯವರಿಂದ ಅಥವ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಿಂದ ಪಡೆಯಬಹುದು.
ಫೋನ್: 23564678, 9880453464 23601649

ಸ್ಥಳ: ಬೆಂಗಳೂರು
ದಿನಾಂಕ: 06.11.2019

ಸಹಿ/– ಮಾರಾಟಾಧಿಕಾರಿ
ಮಹಿಳಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಶೇಷಾದ್ರಿಪುರಂ, ಬೆಂಗಳೂರು